ಬಳಿ ಇದ್ದರೆ ಅಲ್ಲಿಯೇ ಹಾಗೂ ನದಿಗಳ ಆಚೆಯ ಬದಿಗೆ ಇದ್ದರೆ ಅಲ್ಲಿಯೇ ಉಳಿಯಬೇಕಾದ ಅವ್ಯವಸ್ಥೆ ಇದ್ದಕ್ಕಿದ್ದಹಾಗೆ ಮಳೆ ಬಿದ್ದು ನದಿಗಳು ತುಂಬಿದರೆ ಸಂಭವಿಸುತ್ತದೆ. ಈ ಹಳ್ಳಿಗಾರರು ಮಳೆಗಾಲದಲ್ಲಿ ಊರಿನಿಂದ ಬೇರೆಡೆಗೆ ಹೋಗುವಂತಿಲ್ಲ. ಇದಕ್ಕೆ ಪರಿಹಾರ ಒಂದು ಸೇತುವೆ ನಿರ್ಮಾಣವಾಗಬೇಕು. ಇದನ್ನು ಜಿಲ್ಲಾ ಪರಿಷತ್‌ನಲ್ಲಿ ಮಾಡಿಸಬಹುದೆಂಬ ಉತ್ತರದಿಂದ ಸಾರ್ಥಕವಾಗಲಾರದು, ಬದಲಾಗಿ ರಾಜ್ಯ ಸರ್ಕಾರವೇ ತನ್ನ ಬಜೆಟ್‌ನಲ್ಲಿ ಸೇರಿಸಿಕೊಂಡು ಕಾರ್ಯಾರಂಭ ಪ್ರಾರಂಭಿಸಿದರೆ ಮೇಲಿನ ಎಲ್ಲಾ ಸಂದರ್ಭಕ್ಕೂ ರಾಮಬಾಣವಾಗುತ್ತದೆ ಎಂದು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಇದು ಜಿಲ್ಲಾ ಪರಿಷತ್‌ಗೆ ಸಂಬಂಧಪಟ್ಟಂಥ ವಿಚಾರ, ಅಲ್ಲಿ ಕೇಳುವುದಕ್ಕೆ ಆಗುವುದಿಲ್ಲ ಎಂದು ಸರ್ಕಾರವನ್ನು ಕೇಳುತ್ತಾ ಇದ್ದಾರೆ. ನಮ್ಮಲ್ಲಿ ಕಡೆ ಹಣ ಖರ್ಚು ಮಾಡುವುದಕ್ಕೆ ಅವಕಾಶವಿಲ್ಲ. ಜಿಲ್ಲಾ ಪರಿಷತ್‌ನವರಿಗೆ ಈ ಕೆಲಸವನ್ನು ತುರ್ತಾಗಿ ಮಾಡಿ ಕೊಡಬೇಕು ಎಂದು ಅವರಿಗೆ ಆದೇಶ ಕಳಿಸುತ್ತೇವೆ.

೮ ರಾಜ್ಯದಲ್ಲಿ ಪ್ರಕೃತಿ ವಿಕೋಪಕ್ಕೆ ಒಳಾದವರಿಗೆ ಅರಣ್ಯ ಇಲಾಖೆಯಿಂದ ಮರ ಮುಟ್ಟುಗಳನ್ನು ಖರೀದಿಸಲು ಧನಸಹಾಯ ಒದಗಿಸುವುದು.

ಶ್ರೀ ರಮಾನಾಥ ರೈ.—ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ಪ್ರಕೃತಿ ವಿಕೋಪಕ್ಕೆ ಒಳಗಾದ ನತದೃಷ್ಟರಿಗೆ ಸರಕಾರವು ಕಂದಾಯ ಇಲಾಖೆಯ ಶಿಫಾರಸ್ಸಿನಂತೆ ರೂ. ೫,೦೦೦-೦೦ ಬೆಲೆಬಾಳುವ ಮರ ಮುಟ್ಟುಗಳನ್ನು ಅರಣ್ಯ ಇಲಾಖೆಯಿಂದ ಕೊಡಿಸುವ ವ್ಯವಸ್ಥೆ ಇದೆ ಆದರೆ ಕಂದಾಯ ಇಲಾಖೆಯವರು ಶಿಫಾರಸ್ಸು ಮಾಡಿದರೂ ಅರಣ್ಯ ಇಲಾಖೆಯವರು ತತ್ವಶಃ ಅದನ್ನು ಪಾಲಿಸುವುದಿಲ್ಲ. ಅಲ್ಲದೆ ಮರಮಂಟ್ಟುಗಳನ್ನು ದಾಸ್ತಾನಿಲ್ಲ ಎಂಬ ನೆಪವೊಡ್ಡಿ ಬೇರೆ ಬೇರೆ ಸಬ್ ಡಿವಿಜನ್‌ಗೆ ಜನರನ್ನು ಅಲೆದಾಡಿಸುತ್ತಾರೆ. ಕೊನೆಗೆ ಮರ ಒದಗಿಸಿದರೂ ಅದು ಕಳಪೆ ದರ್ಜೆಯದಾಗಿರುತ್ತದೆ. ಮರ ದೊರೆಯುವ ಮೊದಲೇ ಅಲೆದಾಡಲು ಹಣ ಖರ್ಚಾಗಿರುತ್ತದೆ. ಈ ಅನ್ಯಾಯವನ್ನು ತಪ್ಪಿಸಲು ಸದರಿ ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ ಮರ ಮುಟ್ಟುಗಳನ್ನು ಖರೀದಿಸಲು ಕಂದಾಯ ಇಲಾಖೆಯ ಮೂಲಕ ನೇರ ಧನ ಸಹಾಯ ಒದಗಿಸುವಂತೆ ಕ್ರಮ ಕೈಕೊಳ್ಳಬೇಕಾಗಿ ಈ ಮೂಲಕ ಕೇಳಿ ಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ತರಿಸಿಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೆ, ಈಗ ಒಂದು ಪ್ರಶ್ನೆ ಅಲ್ಲಿ ಕೌನ್ಸಿಲ್ ನಡೆಯುತ್ತಿದೆಯೇ ?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎನ್, ನಾಯಕ್.—ನಾನು ಕೊಡುತ್ತೇನೆ. ಅಲ್ಲಿ ಕೌನ್ಸಿಲ್ ನಡೆಯುತ್ತಿದೆಯೇ ?

ಅಧ್ಯಕ್ಷರು.—ತಾವು ಮಧ್ಯದಲ್ಲಿ ಈ ರೀತಿ ಇಂಟರ್‌ಫಿಯರ್ ಮಾಡುವುದು ಬೇಡ. ನೋಡಿ ನಾಯಕರೆ, ನಿಮಗೆ ಹೇಳುತ್ತೇನೆ. ನೀವು ಈ ರೀತಿ ಸಭೆ ನಡೆಸುವುದಕ್ಕೆ ಇಂಟರ್‌ಫಿಯರ್ ಮಾಡಿದರೆ.....

ಶ್ರೀ ಆರ್. ಎನ್, ನಾಯಕ್.—ಈ ಸಭೆ ನಡೆಯಬೇಕಾದರೆ ತಾವು ಅಲ್ಲಿ ಕುಳಿತಿರಬೇಕು ಮಂತ್ರಿಗಳು ಅಲ್ಲಿ ಇರಬೇಕು. ನಾವು ಇರಬೇಕು ಆಗ ಮಾತ್ರ ಸಭೆ ನಡೆಯುತ್ತದೆ.

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದರಿಂದ ಟೈಂ ಆಗುತ್ತಿದೆ ಎಂದು ಇದೆ, ಬ್ಯಾಲೆಟ್‌ಗೆ ಹಾಕಬೇಕಾಗುತ್ತದೆ

ಶ್ರೀ ಆರ್. ಎನ್. ನಾಯಕ್.—ಇಲ್ಲಿ ಟೈಂ ಪಾಸ್ ಮಾಡುವುದು ಮುಖ್ಯವಲ್ಲ. ಏನಾದರೂ ಸಮಸ್ಯೆಯ ಪರಿಹಾರವಾಗಬೇಕು. ಈಗ ಕೌನ್ಸಿಲ್ ನಡೆಯುತ್ತಿದೆಯೇ ಹೇಳಿ, ಮಾನ್ಯ ಮಂತ್ರಿಗಳು ಎಲ್ಲಿ ಹೋಗಿದ್ದಾರೆ.

ಅಧ್ಯಕ್ಷರು.—ಈಗ ತಾವಿಬ್ಬರೂ ಕುಳಿತುಕೊಳ್ಳುತ್ತೀರೋ ಇಲ್ಲವೋ ? ಶಿಸ್ತಿನಲ್ಲಿ ಯಾರಿಗೂ ಏನೂ ಮಾತನಾಡುವುದಕ್ಕೆ ಅವಕಾಶವಿಲ್ಲ. I will not allow anybody to speak.

ಶ್ರೀ ಆರ್. ಎನ್. ನಾಯಕ್.—ನಮ್ಮನ್ನು ಎಷ್ಟು ದಿವಸ ಹೀಗೆ ಕೂಡಿಸುತ್ತೀರಿ ?

ಶ್ರೀ ಎಂ. ರಾಮಪ್ಪ.—ಇಲ್ಲಿ ನಾವು ಸಮ್ಮನೆ ಕುಳಿತುಕೊಳ್ಳುವುದಕ್ಕೆ ಬಂದಿಲ್ಲ.

ಅಧ್ಯಕ್ಷರು.—ನಿಯಮಗಳ ಚೌಕಟ್ಟಿನಲ್ಲಿ ಸಭೆ ನಡೆಸುವುದಕ್ಕೆ ನೀವು ಅಸ್ಪದ ಮಾಡಿಕೊಡಬೇಕಾಗಿದೆ ನಾನು ಮೊನ್ನೆ ದಿವಸ ನಿಮಗೆ ಹೇಳಿದ್ದೇನೆ. ಪ್ರತಿಯೊಬ್ಬ ಮಂತ್ರಿಗಳೂ ೩೫ರ ಸೂಚನೆಗಳಿಗೆ ಉತ್ತರ ಕೊಡಲೇಬೇಕು ಎಂದು ನಿಯಮ ಇಲ್ಲ. ಸದನದ ಗಮನಕ್ಕೆ ತರುವುದು ನಿಮ್ಮ ಕರ್ತವ್ಯ. ತದನಂತರ ಸರ್ಕಾರದವರು ಸಾಕಷ್ಟು ಉತ್ತರ ಕೊಟ್ಟಿದ್ದಾರೆ.

ಶ್ರೀ ಆರ್.ಎನ್. ನಾಯಕ್.—ಕೌನ್ಸಿಲ್ ಈಗ ನಡೆಯುತ್ತಿದೆಯೇ ?

ಅಧ್ಯಕ್ಷರು.—ನಾವು ಹೇಳಿದ್ದೇವೆ. ಮಾನ್ಯ ಮಂತ್ರಿಗಳು ಸಾಕಷ್ಟು ಉತ್ತರ ಕೊಟ್ಟೇ ಕೊಡುತ್ತಾ ಇದ್ದಾರೆ. ಇಷ್ಟು ಉತ್ತರಗಳನ್ನು ಹಿಂದೆ ಯಾವಾಗಲೂ ಕೊಟ್ಟಿರಲಿಲ್ಲ. ನೀವು ಸುಮ್ಮನೆ ಗಲಾಟೆ ಮಾಡುತ್ತೀರಿ.

ಶ್ರೀ ಆರ್. ಎನ್. ನಾಯಕ್,—ಮಾನ್ಯ ಲಕ್ಷ್ಮೀಸಾಗರ್‌ರವರೊಬ್ಬರನ್ನೇ ಮಂತ್ರಿಯನ್ನಾಗಿ ಮಾಡಿ, ಬಾಕಿಯವರನ್ನು ಇತಬೇಡಿ. ಮಾನ್ಯ ಲಕ್ಷ್ಮೀಸಾಗರ್‌ರವರು ಒಬ್ಬರೇ ಎಲ್ಲಾ ಮಂತ್ರಿಯಾಗಲಿ ೨೦ ಜನ ಮಂತ್ರಿಗಳಿಗೂ ಒಬ್ಬರೇ ಆಗಲಿ, ಅವರೊಬ್ಬರೆ ಉತ್ತರ ಕೊಡಲಿ, ಬಾಕಿಯವರು ಇದ್ದು ಏನು ಪ್ರಯೋಜನ ? ತಮ್ಮ ಅಧ್ಯಕ್ಷತೆಯಲ್ಲಿ ಹೀಗಾದರೆ ಬಹಳ ದುಃಖ ಇದು.

ಅಧ್ಯಕ್ಷರು.—ನನ್ನ ಜವಾಬ್ದಾರಿ ನನಗೆ ಗೊತ್ತಿದೆ.

SRIR. N. NAYAK.—Sir, you are a very powerful speaker, why don't they come here,

ಅಧ್ಯಕ್ಷರು.—ನಾನು ಎಲ್ಲರಿಗೂ ಅವಕಾಶ ಕೊಡಬೇಕು ಎಂದು ಒಂದೊಂದು ದಿವಸ ೩೫ರ ೫೦ ಸೂಚನೆಗಳಿಗೆ ಅವಕಾಶ ಕೊಟ್ಟಿದ್ದೇನೆ.

SRI R. N. NAYAK.—Hon speaker has got the power to call them also. What is this ?

ಅಧ್ಯಕ್ಷರು.—ಎಲ್ಲಾ ಮಂತ್ರಿಗಳು ಹಾಜರು ಇರಲೇಬೇಕು ಎಂದು ಇಲ್ಲ, ಪ್ರತಿ ದಿವಸ ಎಲ್ಲಾ ೩೫ರ ಸೂಚನೆಗಳಿಗೆ ಉತ್ತರ ಕೊಡಲೇಬೇಕು ಎಂದೂ ಇಲ್ಲ.

ಶ್ರೀ ಆರ್. ಎನ್. ನಾಯಕ್,—ಇದು ತಮ್ಮ ರೂಲಿಂಗ್ ತಾನೇ.

ಅಧ್ಯಕ್ಷರು.—ತಾವು ಈಗ ಕುಳಿತುಕೊಳ್ಳುತ್ತೀರೋ ಇಲ್ಲವೋ ?

ಶ್ರೀ ಆರ್. ಎನ್. ನಾಯಕ್.—ಇದು ತಮ್ಮ ರೂಲಿಂಗ್ ಆದರೆ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು.—ಹೌದು, ರೂಲಿಂಗೇ ಆದು.

ಶ್ರೀ ಆರ್. ಎನ್. ನಾಯಕ್,—ಮಾನ್ಯ ಮಂತ್ರಿಗಳು ಸಭೆಯಲ್ಲಿ ಹಾಜರು ಇರಬೇಕು. ಯಾವಾಗಲೂ ಕೊಡಬೇಕು ಎಂದು ಕರಾರು ಏನಿಲ್ಲ. ಇದು ತಮ್ಮ ರೂಲಿಂಗ್ ಅಲ್ಲವೇ ? ಕರ್ನಾಟಕ ವಿಧಾನಸಭೆಯಲ್ಲಿ ತಮ್ಮ ದೊಡ್ಡ ರೂಲಿಂಗ್ ಇದು ನಡೆಯಲಿ,

ಅಧ್ಯಕ್ಷರು.—ಮಾನ್ಯ ಎಲ್ಲಾರಿಗೌಡರೇ ಕೇಳಿ.

ಶ್ರೀ ರಮಾನಾಥ ರೈ.—ನನ್ನದು ಇನ್ನೊಂದು ಪ್ರಶ್ನೆ ಇದೆ.

ಅಧ್ಯಕ್ಷರು.—ಮಾನ್ಯ ರೈ ಅವರೇ ತಾವು ಕುಳಿತುಕೊಳ್ಳುತ್ತೀರೋ ಇಲ್ಲವೋ ?

ಶ್ರೀ ರಮಾನಾಥ ರೈ.—ಇನ್ನೊಂದು ಇದೆ.

ಅಧ್ಯಕ್ಷರು.—ಉತ್ತರ ತರಿಸಿಕೊಡುತ್ತೇನೆ ಎಂದು ಅವರು ಹೇಳುತ್ತಾರೆ, ನಾನೂ ಹೇಳುತ್ತೇನೆ,

ಶ್ರೀ ರಮಾನಾಥ ರೈ.—ಅದಲ್ಲ, ಇನ್ನೊಂದು ಬೇರೆ ಪ್ರಶ್ನೆ ಇದೆ.

ಅಧ್ಯಕ್ಷರು.—ಆಮೇಲೆ ಹೇಳಿ. ಇನ್ನೊಮ್ಮೆ ಅವಕಾಶ ಕೊಡುತ್ತೇನೆ.

ಶ್ರೀ ರಮಾನಾಥ ರೈ.—ಇದು ಪೂರಕ ಪ್ರಶ್ನೆಯಲ್ಲ, ಬೇರೆ ಪ್ರಶ್ನೆ.

ಅಧ್ಯಕ್ಷರು.—ಸೆಕೆಂಡ್ ಲಿಸ್ಟ್ ಆಮೇಲೆ ಕರೆಯುತ್ತೇನೆ ಎಂದು ಹೇಳಿದೆ. ತಾವು ಈಗ ಓದಿ.

೯) ಪೋಲೀಸ್ ಇಲಾಖೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ೧೯೮೪ರ ಹಿಂದೆ ಪರೀಕ್ಷೆಗಳನ್ನು ನಡೆಸಿದ್ದರೂ ನೇಮಕಾತಿ ಮಾಡದೇ ಇರುವುದು.

೪-೩೦ ಪಿ. ಎಂ.

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪೋಲೀಸ್ ಇಲಾಖೆಯಲ್ಲಿ ಸಬ್‌ಇನ್ಸ್‌ಪೆಕ್ಟರ್ ಹುದ್ದೆಗೆ ಲಿಖಿತ ಪರೀಕ್ಷೆ ಮೌಖಿಕ ಪರೀಕ್ಷೆ ದೇಹದಾರ್ಢ್ಯದ ಪರೀಕ್ಷೆಗಳನ್ನು ಅಭ್ಯರ್ಥಿಗಳಿಗೆ ೧೯೮೪ರಷ್ಟು ಹಿಂದೆಯೇ ನಡೆಸಿದ್ದರೂ ಇನ್ನೂ ನೇಮಕಾತಿ ಆಗಿರುವುದಿಲ್ಲ. ಇದರಿಂದ ಅಭ್ಯರ್ಥಿಗಳಿಗೆ ತುಂಬಾ ಅನ್ಯಾಯವಾಗಿದೆ. ಈಗ ಈ ಅಭ್ಯರ್ಥಿಗಳ ವಯೋಮಿತಿ ಮೀರುವ ಸಂಭವ ಇರುವುದರಿಂದ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್ (ಮುಖ್ಯ ಮಂತ್ರಿಗಳ ಪರವಾಗಿ).—ಅಧ್ಯಕ್ಷರೆ, ಡೈರೆಕ್ಟರ್ ಜನರಲ್ ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಅವರು ದಿನಾಂಕ ೫-೪-೧೯೮೪ರಂದು ಹೊರಡಿಸಿದ ಅಧಿಸೂಚನೆಯಲ್ಲಿ ೫೦ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಅರ್ಜಿಗಳನ್ನು ಕರೆದರು. ನಂತರ ಡೈರೆಕ್ಟರ್ ಜನರಲ್ ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಅವರು ಕೋರಿದಂತೆ ಈ ಹುದ್ದೆಗಳನ್ನು ೭೫ಕ್ಕೆ ಹೆಚ್ಚಿಸಲು ದಿನಾಂಕ ೨೦-೬-೮೪ ರಂದು ಅನುಮತಿ ನೀಡಲಾಯಿತು.

ಇಲಾಖಾ ನೇಮಕಾತಿ ಸಮಿತಿಯು ಅರ್ಜಿಗಳನ್ನು ಸಲ್ಲಿಸಿದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ೧೯೮೪ರ ಅಕ್ಟೋಬರ್ ತಿಂಗಳಿನಲ್ಲಿ ನಡೆಸಿ, ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಪಟ್ಟಿಯನ್ನು ೧೯೮೫ರ ಮಾರ್ಚ್ ತಿಂಗಳಿನಲ್ಲಿ ಪ್ರಕಟಿಸಿತು. ದೈಹಿಕ ಸಾಮರ್ಥ್ಯ ಪರೀಕ್ಷೆ ವಾಕ್ ಪರೀಕ್ಷೆಗಳನ್ನು ಮುಂಗಿಸಲಾಗಿದ್ದು, ಇನ್ನು ಮೌಖಿಕ ಪರೀಕ್ಷೆಯನ್ನು ಮಾತ್ರ ನಡೆಸಬೇಕಾಗಿದೆ, ಇದನ್ನು ಆದಷ್ಟು ಜಾಗ್ರತೆಯಾಗಿ ನಡೆಸಲಾಗುವುದು.

೧೦) ಸಂಕೇಶ್ವರ ಮತ ಕ್ಷೇತ್ರದಲ್ಲಿ ಪರಿಶಿಷ್ಟ ವರ್ಗಗಳಿಗೆ ಮಂಜೂರಾದ ಸಂಪರ್ಕ ದಾರಿಗಳನ್ನು ಪೂರ್ತಿ ಮಾಡುವಲ್ಲಿ ವಿಳಂಬವಾಗಿರುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸಂಕೇಶ್ವರ ಮತಕ್ಷೇತ್ರದ ಪರಿಶಿಷ್ಟ ವರ್ಗದ ಬಡಾವಣೆಗಳಿಗೆ ಮಂಜೂರಾಗಿರುವ ಸಂಪರ್ಕ ದಾರಿಗಳ ಕೆಲಸವನ್ನು ಪ್ಲಾನ್ ಎಸ್ಟಿಮೇಟಿನಂತೆ ಪೂರ್ತಿ ಮಾಡುವುದರಲ್ಲಿ ವಿಳಂಬವಾಗಿದ್ದು ಇನ್ನೂ ಅರ್ಧಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿದೆ. ಇದೇರೀತಿ ಕವಣೆವಾಡಿ ಗ್ರಾಮಕ್ಕೆ ಸಂಪರ್ಕ ರಸ್ತೆಯನ್ನು ಅರ್ಧಕ್ಕೆ ತಯಾರಿಸಿದ್ದು ಪೂರ್ತಿ ಮಾಡಿಸುವುದರಲ್ಲಿ ವಿಳಂಬವಾಗುತ್ತಿದೆ. ಬೈರಾಪುರ ಗ್ರಾಮದ ಸಮೀಪದ ಸೇತುವೆ ನಿರ್ಮಾಣ ಕೂಡ ಸ್ಥಗಿತಗೊಂಡಿದೆ. ಆಯವ್ಯಯದಲ್ಲಿ ಬಂದಿರುವ ಯಾದಗೂಡ್ ಅಮೃಣಿಗಿ ನಿಡಶೋಸಿ ಸಂಪರ್ಕ ರಸ್ತೆಯನ್ನು ಡಾಂಬರೀಕರಣ ಮಾಡುವುದರಲ್ಲಿ ವಿಳಂಬವಾಗುತ್ತಿದ್ದು ಮಳೆಗಾಲ ಬರುತ್ತಿದ್ದು ಕೆಲಸ ಪೂರ್ತಿಯಾಗದಿರುವ ಬಗ್ಗೆ ನಾವು ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆ. ಈ ಎಲ್ಲಾ ಕೆಲಸಗಳನ್ನು ಈ ವರ್ಷದ ಮಳೆಗಾಲದ ಪ್ರಾರಂಭಕ್ಕಿಂತ ಮುಂಚಿತವಾಗಿ ಪೂರ್ಣ ಮಾಡುವುದಾಗಿ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದವರು ಹಾಗೂ ಜಿಲ್ಲಾ ಪರಿಷತ್‌ನವರು ಕೊಟ್ಟಿರುವ ಆಶ್ವಾಸನೆ ವಿಫಲವಾಗಿದೆ. ಕಾರಣ ಇದಕ್ಕೆ ಸಂಬಂಧಪಟ್ಟ ಜಿಲ್ಲಾ ಪರಿಷತ್ ಅಧಿಕಾರಿಗಳಿಗೆ ಸೂಚನೆ ಇಟ್ಟು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸುವಂತೆ ಸದನದಲ್ಲಿ ಒತ್ತಾಯಿಸುತ್ತೇನೆ ಹಾಗೂ ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಂದ ಹೇಳಿಕೆ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪರಿಷತ್ತಿನವರಿಗೆ ಮಾನ್ಯ ಸದಸ್ಯರು ಹೇಳಿದ್ದರೂ ಸಹ ಏನೂ ಕೆಲಸ ಆಗಲಿಲ್ಲ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರೆ ಹೇಳಿದ್ದಾರೆ.